RNU AIR DHARWAD

APRIL 29, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಬಾಗಲಕೋಟೆ ಜಿಲ್ಲೆ, ಕೂಡಲಸಂಗಮದಲ್ಲಿ, ಇಂದು ಮತ್ತು ನಾಳೆ, 'ಅನುಭವ ಮಂಟಪ; ಬಸವಾದಿ ಶರಣರ ವೈಭವ', ಕಾರ್ಯಕ್ರಮ.
- ಬೆಳಗಾವಿ ಜಿಲ್ಲೆ ನಂದಗಡದ, ಸಂಗೊಳ್ಳಿ ರಾಯಣ್ಣ, 'ವೀರಭೂಮಿ'ಯ ಕಾಮಗಾರಿ, ಅಂತಿಮ ಹಂತಕ್ಕೆ; ಶೀಘ್ರ ಮುಖ್ಯಮಂತ್ರಿ, ಲೋಕಾರ್ಪಣೆ.
- ಗೋಪಾಲ ಸಮುದಾಯದ, ಕುಲಶಾಸ್ತ್ರೀಯ ಅಧ್ಯಯನಕ್ಕೆ, ಮೈಸೂರು ವಿಶ್ವವಿದ್ಯಾಲಯ, ಸಿದ್ಧತೆ.
- ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಜಾಗ್ರತಿ, ವಿಶ್ವ ದಿನಾಚರಣೆ, ಸಂಪನ್ನ.

<><><>

ಈಗ ವಾರ್ತೆಗಳ ವಿವರ

<><><>

ಬಾಗಲಕೋಟೆ ಜಿಲ್ಲೆ, ಕೂಡಲಸಂಗಮದಲ್ಲಿ, ಇಂದು ಮತ್ತು ನಾಳೆ, 'ಅನುಭವ ಮಂಟಪ; ಬಸವಾದಿ ಶರಣರ ವೈಭವ' ಕಾರ್ಯಕ್ರಮ, ವಿಜೃಂಭಣೆಯಿಂದ ಜರುಗಲಿದೆ. ಕೂಡಲಸಂಗಮ ಅಭೂತಪೂರ್ವವಾಗಿ ಶೃಂಗಾರಗೊಂಡಿದೆ. ಜಿಲ್ಲಾಧಿಕಾರಿ ಕೆ.ಎಂ. ಜಾನಕಿ, ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದ ಪದಾಧಿಕಾರಿಗಳೊಂದಿಗೆ, ಸಕಲ ಪೂರ್ವ ಸಿದ್ಧತೆಗಳನ್ನು, ಪರಿಶೀಲಿಸಿದರು.

<><><>

ಇಂದು ಬೆಳಗ್ಗೆ 10 ಗಂಟೆಗೆ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ, 'ವಚನ ಸಾಹಿತ್ಯ, ಸಮಕಾಲೀನ ಸಂವೇದನೆ' ಕುರಿತ ವಿಚಾರಗೋಷ್ಠಿಗೆ ಚಾಲನೆ ನೀಡಲಿದ್ದಾರೆ.

<><><>

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ, ಬಸವಣ್ಣನವರ ಭಾವಚಿತ್ರಕ್ಕೆ ಪು ಷ್ಪಾರ್ಚನೆ ಮಾಡಿ, ಸಾಂಸ್ಕೃತಿಕ ಹಾಗೂ ಕಲಾ ತಂಡಗಳ ಮೆರವಣಿಗೆಗೆ ಚಾಲನೆ ನೀಡುವರು.

<><><>

ವಿಶ್ವ ಗುರು ಬಸವಣ್ಣನವರ ಜಯಂತಿ ಹಿನ್ನೆಲೆ, ನಾಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಧಾರವಾಡದ ಹಿರಿಯ ಗ್ರಂಥಾಲಯ ವಿಜ್ಞಾನಿ ಎಸ್.ಆರ್. ಗುಂಜಾಳ ಅವರಿಗೆ, 'ಬಸವ ರಾಷ್ಟ್ರೀಯ ಪುರಸ್ಕಾರ' ಪ್ರದಾನಿಸಿ, ಗೌರವಿಸಲಿದ್ದಾರೆ.

<><><>

ನಾಡಿನ ಖ್ಯಾತ ಕಲಾವಿದರು, ಮನೋರಂಜನಾ ಕಾರ್ಯಕ್ರಮಗಳನ್ನು, ನಡೆಸಿಕೊಡಲಿದ್ದಾರೆ.

<><><>

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಸ್ತು ಸಂಗ್ರಹಾಲಯದ, ವೀರಭೂಮಿ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಶೀಘ್ರ ಮುಖ್ಯಮಂತ್ರಿ ಉದ್ಘಾಟಿಸಲಿದ್ದಾರೆ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು, ನಂದಗಡದ ವೀರಭೂಮಿಗೆ ಸಚಿವರು ಭೇಟಿ ನೀಡಿ, ಕಾಮಗಾರಿ ಪರಿಶೀಲಿಸಿದರು. ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ ಹಾಗೂ ನಂದಗಡ ಮ್ಯೂಸಿಯಂ ಸೇರಿ, ಒಟ್ಟು 261 ಕೋಟಿ ರೂಪಾಯಿ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. 59 ಕೋಟಿ ರೂಪಾಯಿ ವೆಚ್ಚದಲ್ಲಿ, ಒಟ್ಟು 13 ಎಕರೆ ಜಾಗೆಯಲ್ಲಿ ನಂದಗಡ ವಸ್ತುಸಂಗ್ರಹಾಲಯ ನಿರ್ಮಿಸಲಾಗಿದೆ ಎಂದರು. ಸಂಗೊಳ್ಳಿ ರಾಯಣ್ಣ ಅಧ್ಯಯನ ಕೇಂದ್ರ, ಗ್ರಂಥಾಲಯ ಹಾಗೂ ಐತಿಹಾಸಿಕ ಮಾಹಿತಿ ಒದಗಿಸುವ, ರೊಬೊಟ್ ಪ್ರತಿಷ್ಠಾಪಿಸಲಾಗುವುದು ಎಂದು, ಸಚಿವರು ತಿಳಿಸಿದರು.

<><><>

ನಾಡಿದ್ದು, ಮೇ 1 ರಿಂದ 4ನೇ ತಾರೀಖಿನ ವರೆಗೆ, ಮುಂಬೈಯಲ್ಲಿ, ವಿಶ್ವ ಧ್ವನಿ, ದೃಶ್ಯ ಮತ್ತು ಮನೋರಂಜನಾ ಶೃಂಗಸಭೆ, 'ವೇವ್ಸ್' ಜರುಗಲಿದೆ. ಭಾರತವನ್ನು ಜಾಗತಿಕ ಸೃಜನಶೀಲತೆಯ ಕೇಂದ್ರ ಬಿಂದುವಾಗಿಸಲಿದೆ ಎಂದು, ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ, ರಾಜ್ಯ ಸಚಿವ, ಡಾಕ್ಟರ್ ಎಲ್. ಮುರುಗನ್, ತಮ್ಮ ಲೇಖನದಲ್ಲಿ ತಿಳಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಪರಿಕಲ್ಪನೆಯಲ್ಲಿ ರೂಪುಗೊಂಡ, ವೇವ್ಸ್ ಶೃಂಗ ಸಭೆ, ಸೃಜನಶೀಲತೆ, ನಾವಿನ್ಯತೆ ಮತ್ತು ಉದ್ಯಮಶೀಲತೆಯಲ್ಲಿ, ವಿಶ್ವವನ್ನು ಮುನ್ನಡೆಸುವ ಬದ್ಧತೆ ಮತ್ತು ಸಿದ್ಧತೆಯನ್ನು ಸೂಚಿಸುತ್ತದೆ ಎಂದು, ಅವರು ಉಲ್ಲೇಖಿಸಿದ್ದಾರೆ.ಭಾರತದ ಮಾಧ್ಯಮ ಮತ್ತು ಮನೋರಂಜನಾ ಉದ್ಯಮ, 2 ದಶಾಂಶ 7 ಟ್ರಿಲಿಯನ್ ರೂಪಾಯಿ ತಲುಪುತ್ತಿದೆ ಎಂದು, ಸಚಿವ ಮುರುಗನ್ ಹೇಳಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿಯವರ, 'ವೋಕಲ್ ಫಾರ್ ಲೋಕಲ್' ಪ್ರಕಲ್ಪದಡಿ, ದೇಸಿ ವಸ್ತ್ರ ಖಾದಿ, 1 ಲಕ್ಷ 70 ಸಾವಿರದ 551 ಕೋಟಿ ರೂಪಾಯಿಯ ್ಟ, ದಾಖಲೆಯ ಮಾರಾಟ ಸಾಧಿಸಿದೆ. ಸ್ವಾತಂತ್ರ್ಯದಿಂದ ಫ್ಯಾ ’ನ್ ವರೆಗೆ, ಸ್ವದೇಶಿ ವಸ್ತ್ರ ಖಾದಿ, ಭಾರತ ಉದಯದ ಹೃದಯವಾಗಿದೆ ಎಂದು, ಅವರು ಶ್ಲಾಘಿಸಿದ್ದಾರೆ.

<><><>

ಮಕ್ಕಳನ್ನು ದಢಾರ ಹಾಗೂ ರುಬೆಲ್ಲಾ ರೋಗದಿಂದ ರಕ್ಷಿಸುವ, ವಿಶೇ ’ ಲಸಿಕಾ ಅಭಿಯಾನ ರಾಜ್ಯಾದ್ಯಂತ ಆರಂಭವಾಗಿದೆ ಎಂದು, ಆರೋಗ್ಯ ಇಲಾಖೆ, ತಿಳಿಸಿದೆ. ದಢಾರ ಹಾಗೂ ರುಬೆಲ್ಲಾ ತಡೆಗಟ್ಟಲು, ಕೈಗೊಂಡ ಕ್ರಮಗಳ ಕುರಿತು, ಸಂತಾನೋತ್ಪತ್ತಿ ಹಾಗೂ ಮಕ್ಕಳ ವಿಜಯಪುರ ಜಿಲ್ಲಾ ಆರೋಗ್ಯಾಧಿಕಾರಿ, ಡಾಕ್ಟರ್ ಪರಶುರಾಮ ಹಿಟ್ನಳ್ಳಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ಡಾ. ಪರಶುರಾಮ ಹಿಟ್ನಳ್ಳಿ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ, ಶಾಮ್ ಭಟ್ ಅವರು, ಹುಬ್ಬಳ್ಳಿಯಲ್ಲಿ ಕೊಲೆಗೀಡಾದ ಐದು ವರ್ಷದ ಬಾಲಕಿ ಮನೆಗೆ ಭೇಟಿ ನೀಡಿ, ಪೋಷಕರಿಗೆ ಸಾಂತ್ವನ ಹೇಳಿದರು. ಪೊಲೀಸ್ ಮಹಜರು ವೇಳೆ, ಹಲ್ಲೆಗೈದು ತಪ್ಪಿಸಿಕೊಳ್ಳಲು ಯತ್ನಿಸಿದ, ಬಿಹಾರ ಮೂಲದ ಆರೋಪಿ, ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟ ಹಿನ್ನೆಲೆ, ಅವರು ಸ್ಥಳ ಪರಿಶೀಲಿಸಿ, ಸಂಬಂಧಿತ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಸುದ್ದಿಗೋಷ್ಠಿ ನಡೆಸಿದ ಅಧ್ಯಕ್ಷರು, ಆಯೋಗಕ್ಕೆ ದೂರು ಸಲ್ಲಿಕೆಯಾಗಿದೆ. ಘಟನೆ ಕುರಿತು, ಶೀಘ್ರ ಸರ್ಕಾರಕ್ಕೆ ಸಮಗ್ರ ವರದಿ ಸಲ್ಲಿಸುವುದಾಗಿ, ತಿಳಿಸಿದರು.

<><><>

ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲೂಕಿನ ತಾವರಕೆರೆ ಗ್ರಾಮದಲ್ಲಿ, ಮಹಿಳೆಯೋರ್ವರನ್ನು ಸಾರ್ವಜನಿಕವಾಗಿ ಹಲ್ಲೆ ಮಾಡಿದ ಪ್ರಕರಣದ ಹಿನ್ನೆಲೆ, ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ, ಅರ್ಚನಾ ಮಜುಂದಾರ್ ಭೇಟಿ ನೀಡಿ, ಪರಿಶೀಲಿಸಿದರು.

<><><>

ಹಿಂದುಳಿದ ಗೋಪಾಲ ಸಮುದಾಯದ ಕುರಿತು, ಕುಲಶಾಸ್ತ್ರೀಯ ಅಧ್ಯಯನ ಕೈಗೊಳ್ಳಲು, ಮೈಸೂರು ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರ ಸೂಚಿಸಿದೆ. ಬೆಂಗಳೂರಿನ ದೇವರಾಜ ಅರಸು ಸಂಶೋಧನಾ ಸಂಸ್ಥೆ, ಅಧ್ಯಯನಕ್ಕಾಗಿ 11 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದು, ಮುಂಬರುವ ಒಂದು ವರ್ಷದೊಳಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿದೆ. ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕಿ ರೇಖಾ ಜಾಧವ್, ಗೋಪಾಲ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನದ ಸಾರಥ್ಯ ವಹಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ಅಧ್ಯಯನದ ರೂಪುರೇಷೆಯ ವಿವರ ತಿಳಿಸಿದ್ದಾರೆ.

<><><>

ರೇಖಾ ಜಾಧವ್ ಧ್ವನಿ 45 ಸೆಕೆಂದುಗಳು

<><><>

"ಆರೋಗ್ಯ ಮತ್ತು ಸುರಕ್ಷತೆಯಲ್ಲಿ, ಕ್ರಾಂತಿಕಾರಕ ಬದಲಾವಣೆ: ಕೆಲಸದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಡಿಜಿಟಲೀಕರಣದ ಪಾತ್ರ" ಎಂಬ, ಧ್ಯೇಯದೊಂದಿಗೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಜಾಗ್ರತಿ, ವಿಶ್ವ ದಿನಾಚರಣೆ ಜರುಗಿತು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು, ಈ ಜಾಗತಿಕ ಅಭಿಯಾನ, ಆಯೋಜಿಸಿತ್ತು. ಪ್ರದೇಶ ಸಮಾಚಾರಕ್ಕಾಗಿ ಅಗ್ನಿ ಅವಘಡ ತಡೆಯುವ ಕುರಿತು, ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿ ವಲಯದ ಅಗ್ನಿಶಾಮಕ ದಳದ ಪ್ರಾದೇಶಿಕ ಅಧಿಕಾರಿ, ಮಂಜುನಾಥ ಸಾಲಿ.

<><><>

ಮಂಜುನಾಥ ಸಾಲಿ ಧ್ವನಿ 45 ಸೆಕೆಂದುಗಳು

<><><>

ಚಿಕ್ಕಮಗಳೂರು ಜಿಲ್ಲೆ, ಕುದುರೆಮುಖ ವನ್ಯಜೀವಿ ವಿಭಾಗ ಹಾಗೂ ಚಾರಣ ಸ್ಥಳಗಳಿಗೆ, ಮೇ 1 ರಿಂದ ಅವಕಾಶ ಕಲ್ಪಿಸಲಾಗಿದೆ. ಜಾಲತಾಣ aranya vihara.karnataka.gov.in ನಲ್ಲಿ ಹೆಸರು ನೊಂದಾಯಿಸಿ, ಭೇಟಿ ನೀಡಬಹುದು. (36) (ಉಡುಪಿ/23)

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಬಾಗಲಕೋಟೆ ಜಿಲ್ಲೆ, ಕೂಡಲಸಂಗಮದಲ್ಲಿ, ಇಂದು ಮತ್ತು ನಾಳೆ, 'ಅನುಭವ ಮಂಟಪ; ಬಸವಾದಿ ಶರಣರ ವೈಭವ', ಕಾರ್ಯಕ್ರಮ.
- ಬೆಳಗಾವಿ ಜಿಲ್ಲೆ ನಂದಗಡದ, ಸಂಗೊಳ್ಳಿ ರಾಯಣ್ಣ, 'ವೀರಭೂಮಿ'ಯ ಕಾಮಗಾರಿ, ಅಂತಿಮ ಹಂತಕ್ಕೆ; ಶೀಘ್ರ ಮುಖ್ಯಮಂತ್ರಿ, ಲೋಕಾರ್ಪಣೆ.
- ಗೋಪಾಲ ಸಮುದಾಯದ, ಕುಲಶಾಸ್ತ್ರೀಯ ಅಧ್ಯಯನಕ್ಕೆ, ಮೈಸೂರು ವಿಶ್ವವಿದ್ಯಾಲಯ, ಸಿದ್ಧತೆ.
- ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ಆರೋಗ್ಯ ಜಾಗ್ರತಿ, ವಿಶ್ವ ದಿನಾಚರಣೆ, ಸಂಪನ್ನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>